**ದಿನಾಂಕಃ 10-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಎನ್ ಎಸ್ ಬಿ ವಕೀಲರಿಂದ ಅರ್ಜಿದಾರರ ಪರವಾಗಿಃ**

3. ನನ್ನನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದ ಬಗ್ಗೆ ದಾಖಲಾತಿ ಇದೆ . ನಾನು ಎದುರುದಾರ ಸಂಸ್ಥೆಯಲ್ಲಿ ಅಧಿಕಾರಿಯಾಗಿದ್ದೇನೆ ಎಂದರೆ ಹೌದು . ಶಿಸ್ತು ಪ್ರಾಧಿಕಾರಿ ಮಂಡನಾಧಿಕಾರಿಯನ್ನು ನೇಮಕ ಮಾಡಿತ್ತು. ಮಂಡನಾಧಿಕಾರಿ ನೇಮಕ ಮಾಡಿದ ಬಗ್ಗೆ ದಾಖಲಾತಿ ಇದೆ . ಮಂಡನಾಧಿಕಾರಿ ವಿಚಾರಣೆಯಲ್ಲಿ ಹಾಜರಾದ ಬಗ್ಗೆ ದಾಖಲಾತಿ ಹಾಜರು ಪಡಿಸಲಾಗಿದೆಯೇ ಎಂದರೆ ಅದನ್ನು ಪರಿಶೀಲಿಸಬೇಕು . ಅರ್ಜಿದಾರರಿಗೆ ವಿಚಾರಣೆಯಲ್ಲಿ ಸಾಕ್ಷ್ಯ ನೀಡಲು ದಾಖಲಾತಿ ಹಾಜರು ಪಡಿಸಲು ಅವಕಾಶ ನೀಡಲಾಗಿದೆ . ಮಿಥುನ್, ಹಿರಿಯ ಸಹಾಯಕ ರವರನ್ನು ಮಂಡನಾಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ. ಅವರು ನಮ್ಮ ಸಂಸ್ಥೆಯ ನೌಕರ ಆಗಿದ್ದಾರೆ . ಮಂಡನಾಧಿಕಾರಿಗೆ ಈ ಕೇಸಿನಲ್ಲಿ ಸಾಕ್ಷ್ಯ ನುಡಿಯಲು ಪತ್ರ ಬರೆದಿರುವ ಬಗ್ಗೆ ದಾಖಲಾತಿ ಇರುವುದಿಲ್ಲ . ಆ ರೀತಿ ಪತ್ರ ಬರೆದಿಲ್ಲ . ಅರ್ಜಿದಾರರಿಗೆ ಯಾವುದೇ ದಾಖಲಾತಿಯನ್ನು ಒದಗಿಸಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ದಾಖಲಾತಿ ಒದಗಿಸಿರುವ ಬಗ್ಗೆ ಇಲಾಖಾ ವಿಚಾರಣೆ ಆದೇಶ ಹಾಳೆಯಲ್ಲಿ ನಮೂದು ಇದೆ . ಅರ್ಜಿದಾರರಿಗೆ ದಾಖಲಾತಿ ಕೊಟ್ಟ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ . ಅರ್ಜಿದಾರರಿಗೆ ದೋಷಾರೋಪಣಾ ಪಟ್ಟಿ ನಕಲನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ವಿರುದ್ಧ ಆರೋಪ ಏನು ಎಂಬುದನ್ನು ಅರ್ಜಿದಾರರಿಗೆ ನಾವು ತಿಳಿಸಿಯೇ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಇಲಾಖಾ ವಿಚಾರಣೆಯಲ್ಲಿ ಸಂರಕ್ಷಣೆ ಮಾಡಿಕೊಳ್ಳಲು ಅವಕಾಶ ನೀಡಿಲ್ಲ ಎಂದರೆ ಸರಿಯಲ್ಲ. ಸಿ ಆ್ಯಂಡ್ ಡಿ ನಿಯಮಾವಳಿ ಪ್ರಕಾರ ವಿಚಾರಣೆ ನಡೆಸಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರ ಸಂಸ್ಥೆಯ ನೌಕರ ಆಗಿರುವುದರಿಂದ ನಾನು ವಿಚಾರಣಾ ಅಧಿಕಾರಿ ಆಗಲು ಅರ್ಹನಿರಲಿಲ್ಲ ಎಂದರೆ ಸರಿಯಲ್ಲ . ಸಂಸ್ಥೆಗೆ ಅನುಕೂಲ ಮಾಡಿಕೊಡಲು ಅರ್ಜಿದಾರರ ಅನುಪಸ್ಥಿತಿಯಲ್ಲಿ ನಾನು ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ . ನಾನು ಸಂಸ್ಥೆ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಜರು ಪಡಿಸಿರುವ ಯಾವುದೇ ದಾಖಲಾತಿಗಳು ಅರ್ಜಿದಾರರ ಗಮನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ